†Sri AZEEZ SAIT.— The Hon. member seems to be very anxious to have a Guest House. So far as breakages are concerned, there is a depot which will take care of the buses. However I may inform the hon. member that after acquiring the land, I shall consider about the bus-stand, guest house and all that. I am just looking after a land- a suitable land. After that is acquired, we will take care of other facilities.

Sri K. ABDUL SUBHAN.— Will it be finalised at least within 2 or 3 months?

Sri AZEEZ SAIT.— I cannot categorically say that now.

ALLOTMENT OF SITES TO M. L. As. M. L. Cs. AND MINISTERS BY C. I. T. B.

272. Sri K. SRIRAMULU (Gandhinagar).— Will the Minister for Municipal Administration be pleased to state.—

(a) whether the sites have been allotted to the Members of Legislative Assembly, Legislative Council and Ministers through the City Improvement Trust Board, Bangalore from 24-3-1972 to end of 31-7-1973;

(b) if so the names and addresses of the Members who have obtainel the sites together with their measurement and cost;

(c) whether the corner sites have been allotted in the said allotment;

(d) if so, the number of corner sites allotted and the communities to which the allotees belong to

Sri B. BASAVALINGAPPA (Minister for Municipal Administration).—

(a) Yes.

(b) Statement placed on the Table of the House.*

(c) No.

(d) No.

*Copy placed in the Mysore Legislature Library *Vide* No. 21/Dated 28-9-73

ಶ್ರೀ ಕೆ. ಶ್ರೀರಾಮುಲು.—ಸಭೆಯ ಮುಂದೆ ಇಟ್ಟಿರತಕ್ಕ ತಃಖ್ತೆಯಲ್ಲಿನ ಕೊನೇ ಪುಟದಲ್ಲಿ ಸೈಟ್ ನಂಬರ್ ಒಂದು ಮತ್ತು ನಾಲ್ಕು ಎರಡೂ ಒಂದೇ ಆಳತೆಯದಾಗಿದ್ದರೂ ನೊದಲನೆಯ ಸೈಟಿಗೆ ೫೬ ಸಾವಿರ ರೂಪಾಯಿ ಮತ್ತು ಇನ್ನೊಂದಕ್ಕೆ ೪೫ ಸಾವಿರ ರೂಪಾಯಿ ಬೆಲೆ ತೆಗೆದುಕೊಂಡಿದ್ದಾರೆ. ಇದಕ್ಕೆ ಕಾರಣವೇನು ಎಂದು ಹೇಳುತ್ತಾರೆಯೇ ?

†ಶ್ರೀ ಬಿ. ಬಸವಲಿಂಗಪ್ಪ—ಅದರಲ್ಲಿ ಸ್ವಲ್ಪ ತಪ್ಪು ಆಗಿದೆ. ಮೊದಲನೆಯದು ತಪ್ಪು. ನಾಲ್ಕನೆಯ ಸೈಟಿಗೆ ಕೊಟ್ಟಿರುವುದು ಸರಿಯಾದ ಫಿಗರ್ಸ್ ಒಂದನೆಯ ಸೈಟಿಗೂ ಅಷ್ಟೇ ಹಣವನ್ನು ಪಾವತಿ ಮಾಡಿದ್ದಾರೆ.

ಶ್ರೀ ಕೆ. ಶ್ರೀರಾಮುಲು.—ಪಟ್ಟಿಯಲ್ಲಿ ಮಂತ್ರಿಗಳು, ಶಾಸಕರು, ಎಲ್ಲ ಪಕ್ಷದವರೂ ಇದ್ದಾರೆ. ಹೊಸಕೋಟೆ ಜನಿಗೆ ಕೂಡ ಒಂದು ಸೈಟ್ ಕೊಟ್ಟಿದ್ದಾರೆ. ಪಟ್ಟಣದಲ್ಲಿರತಕ್ಕ ಗುಡಿಸಲು ವಾಸಿಗಳಿಗೆ ಸೈಟುಗಳನ್ನು ಒದಗಿಸಬೇಕು ಎಂದು ಹೇಳುವಾಗ ಮುಕ್ಕಾಲು ಎಕರೆಯಷ್ಟು ಇರುವಂಥ ಸೈಟುಗಳನ್ನು ಹಂಚುವ ವ್ಯವಸ್ಥೆ ಮಾಡಿದರೆ ಬಡವರಿಗೆ ಸೈಟುಗಳನ್ನು ಹಂಚುವುದಕ್ಕೆ ಸಾಧ್ಯವೇ ?

ಶ್ರೀ ಬಿ. ಬಸವಲಿಂಗಪ್ಪ—ರಾಜಮಹಲ್ ಬಡಾವಣೆಯಲ್ಲಿ ಹಿಂದಿನ ಮಂತ್ರಿಮಂಡಲವಿದ್ದಾಗ ಸೈಟುಗಳನ್ನು ಕೊಡಲಾಗಿತ್ತು. ಯಾರಿಗೆ ಸೈಟುಗಳನ್ನು ಕೊಡಲಾಗತ್ತು ಆ ಸಂಬಂಧದಲ್ಲಿ ಹೈಕೋರ್ಟಿಗೆ ರಿಟ್ ಹೋಗಿದ್ದು, ನಂತರ ಸುಪ್ರೀಂ ಕೋರ್ಟಿಗೆ ಹೋಗಿದ್ದು ಅಲ್ಲಿ ತೀರ್ಮಾನವಾಗಿ ಪುನಃ ಬಂತು. ಆಲ್ಲಿಂದ ಒಂದ ಮೇಲೆ ಯಾರು ಯಾರು ಆ ಕಾಲಕ್ಕೆ ಅರ್ಜಿಗಳನ್ನು ಕೊಟ್ಟಿದ್ದರು ಮತ್ತು ಯಾರು ಯಾರಿಗೆ ಆ ಕಾಲದಲ್ಲಿ ಸೈಟುಗಳನ್ನು ಕೊಡಲಾಗಿತ್ತು ಅದನ್ನೆಲ್ಲ ಪರಿಶೀಲನೆ ಮಾಡಿ ಈಗ ಸೈಟುಗಳನ್ನು ಕೊಡಲಾಗಿದೆ. ಬೇರೆ ಊರಿನವರಿಗೆ ಸೈಟುಗಳನ್ನು ಕೊಡಬೇಕೇ ಬೇಡವೇ ಎನ್ನುತಕ್ಕ ಬಗ್ಗೆ ಹೇಳುವುದಾದರೆ ಯಾರು ಬೆಂಗಳೂರು ನಗರದಲ್ಲಿ ಇರಲಿಕ್ಕೆ ಇಷ್ಟಪಡುತ್ತಾರೆ, ಆ ರೀತಿಯಾಗಿ ಒಂದು ಡಿಕ್ಲರೇಷನ್ ಯಾರು ಕೊಡುತ್ತಾರೆ ಅಂಥವರಿಗೆ ಸೈಟುಗಳನ್ನು ಕೊಡಬಹುದು ಎಂದು ನಿಯಮಾವಳಿಯಲ್ಲಿ ಅಳವಡಿಸಿದ್ದೇವೆ. ಆ ರೀತಿಯಾಗಿ ಕೊಟ್ಟಿದ್ದೇವೆ. ದೊಡ್ಡ ಸೈಟುಗಳನ್ನು ಮಾಡುವುದಕ್ಕೆ ಬದಲಾಗಿ ಸಣ್ಣ ಸೈಟುಗಳನ್ನು ಮಾಡಿ ಎಲ್ಲರಿಗೂ ಕೊಡಬೇಕಾಗಿತ್ತು ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ಒಳ್ಳೆಯ ಪ್ರಶ್ನೆ. ನಾವು ದೊಡ್ಡ ಸೈಟುಗಳನ್ನೂ ಮಾಡುತ್ತೇವೆ, ಸಣ್ಣ ಸೈಟುಗಳನ್ನೂ ಮಾಡುತ್ತೇವೆ. ಸಣ್ಣ ಸೈಟುಗಳನ್ನು ಬಡವರಿಗೆ ಹಂಚುವ ವ್ಯವಸ್ಥೆ ಮಾಡಿ ಅದನ್ನು ಅರ್ಧ ಬೆಲೆಗೆ ಕೊಡಬೇಕೆಂದು ನಾಡಿದ್ದೇವೆ. ಆ ರೀತಿಯಾಗಿ ಒಂಭತ್ತಾವಿರ ಸಾವಿರ ಸೈಟುಗಳನ್ನು ಹಂಚಿದ್ದೇವೆ. ದೊಡ್ಡ ಸೈಟುಗಳನ್ನು ಮಾಡಿ ಜಾಸ್ತಿ ಹಣವನ್ನು ಅಂತಹ ಸೈಟು ತೆಗೆದುಕೊಳ್ಳುವವರಿಂದ ವಸೂಲು ಮಾಡಿ ಬಡವರಿಗೆ ಸಬ್ಸಿಡೈಸ್ ಮಾಡತಕ್ಕ ವ್ಯವಸ್ಥೆಯನ್ನು ನಿಯಮಾವಳಿಯಲ್ಲಿ ಅಳವಡಿಸಿಕೊಂಡಿದ್ದೇವೆ. ಆದುದರಿಂದ ದೊಡ್ಡದು ಸಣ್ಣದು ಎನ್ನುವ ವ್ಯತ್ಯಾಸವಿರಲೇ ಬೇಕಾಗುತ್ತದೆ. ಯಾರು ಸ್ಥಿತಿವಂತರಾಗಿರುತ್ತಾರೆ

ಅವರು ಒಳ್ಳೆಯ ಮನೆಗಳನ್ನು ಕಟ್ಟಿ ಕತ್ತಲಲ್ಲಿ ಇಟ್ಟುಕೊಂಡಿರತಕ್ಕ ಹಣ ಬೆಳಕಿಗೆ ಬರುವದಕ್ಕೆ ಇದೂ ಒಂದು ದಾರಿ ಎನ್ನುವದು ಸರ್ಕಾರದ ಉದ್ದೇಶವಿದೆ. ಅಂಥವರ ಪರ್ಸೆಂಟೇಜ ಎಷ್ಟಾಗುತ್ತದೆ ಎಂದು ನೋಡಿದರೆ ಮೂರು ನಾಲ್ಕು ಪರ್ಸೆಂಟ್ ಇರ ಬಹುದು. ಐದು ಪರ್ಸೆಂಟಿಗಿಂತ ಹೆಚ್ಚು ಇರುವದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಹೊರಗಿನವರಿಗೆ ಕೂಡ ಸೈಟುಗಳನ್ನು ಕೊಡ ಬಹುದ. ಎಂದು ನಿಯಮಾವಳಿಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇಲ್ಲಿ ಕೊಟ್ಟಿರುವ ಹೆಸರುಗಳನ್ನು ನೋಡಿದರೆ ಅವರೆಲ್ಲ ಬೆಂಗಳೂರು ನಗರದಲ್ಲಿ ಖಾಯಂ ಆಗಿ ಇರುವಂಥ ಜನರಲ್ಲ. ಇವರಿಗೆಲ್ಲ ಸೈಟುಗಳನ್ನು ಯಾವ ಆಧಾರದ ಮೇಲೆ ಕೊಟ್ಟಿರುತ್ತಾರೆ ಎನ್ನುವದನ್ನು ಹೇಳುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ.— ಸೈಟುಗಳನ್ನು ಕೊಡುವ ವಿಷಯದಲ್ಲಿ ನಾನಾಗಲೇ ಸ್ಪಷ್ಟೀಕರಣ ಮಾಡಿದ್ದೇನೆ. ಯಾರು ಯಾರು ಬೆಂಗಳೂರು ನಗರದಲ್ಲಿರುತ್ತೇವೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ ಅಂಥವರಿಗೆ ಕೊಡಬಹುದು ಎಂದು ನಿಯಮಾವಳಿಯಲ್ಲಿ ಅಳವಡಿಸಲಾಗಿದೆ. ಆ ರೀತಿಯಾಗಿ ಕೊಡಲಾಗಿದೆ. ಮಾನ್ಯ ಸದಸ್ಯರಾದ ಪಟ್ಟಸ್ವಾಮಯ್ಯನವರಿಗೂ ಒಂದು ಸೈಟನ್ನು ಕೊಡಲಾಗಿದೆ. ಅವರು ರಾಮನಗರದವರು. ಅವರು ತಮ್ಮ ಮುಪ್ಪಿನ ಕಾಲದಲ್ಲಿ ಇಲ್ಲಿ ಬಂದು ಇರುವದಕ್ಕೆ ಇಷ್ಟಪಡುತ್ತೇನೆಂದು ಹೇಳುತ್ತಾರೆ. ಆ ರೀತಿಯಾಗಿ ಇಚ್ಛೆಯನ್ನು ವ್ಯಕ್ತಪಡಿಸಿದ್ದರೆ ಕೊಡಬಹುದು ಎಂದು ಇರುವುದರಿಂದ ಕೊಟ್ಟಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಬೇರೆ ಕಡೆ ಸೈಟು, ಮನೆ ಇದ್ದರೂ ಬೆಂಗಳೂರಿನಲ್ಲಿ ಸೈಟುಗಳನ್ನು ಕೊಡಬಹುದು ಎಂದು ಇದೆಯೋ? ಇದನ್ನು ದಯವಿಟ್ಟು ಎಗ್ಜಾಮಿನ್ ಮಾಡುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ.— ಬೆಂಗಳೂರು ನಗರದಲ್ಲಿ ಬೇರೆ ನಿವೇಶನ ಅಥವಾ ಮನೆ ಇರಬಾರದು ಎಂದು ನಿಯಮಾವಳಿಯಲ್ಲಿ ಇದೆ ಅದಕ್ಕೆ ಒಂದು ಅಫಿಡವಿಟ್ ತೆಗೆದುಕೊಳ್ಳುತ್ತಾರೆ ಮತ್ತು ಅದರ ಆಧಾರದ ಮೇಲೆ ಸೈಟುಗಳನ್ನು ಹಂಚಿಕೆ ಮಾಡುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ನಾವು ಎಷ್ಟು ಆರಣ್ಯರೋದನ ಮಾಡಿದರೂ ಸೈಟುಗಳನ್ನು ಈ ರೀತಿಯಾಗಿ ಕೊಡುವುದನ್ನು ನಿಲ್ಲಿಸುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ರಾಮುಲು ಅವರು ಹೇಳಿದ ಹಾಗೆ ಮುಕ್ಕಾಲು ಎಕರೆ ಸೈಟುಗಳನ್ನು ಕೊಡುತ್ತಾರಲ್ಲ, ಅವರಿಗೆ ಹರಿಶ್ಚಂದ್ರ ಘಾಟಿನಲ್ಲಿ ಅವಕಾಶ ಕೊಡದಹಾಗೆ ಎಲ್ಲ ಅವರ ಸೈಟಿನಲ್ಲಿಯೇ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಬಡವರಿಗೆ ಇಲ್ಲಿ ಅವಕಾಶವಾಗುತ್ತದೆ. ಹಾಗೆ ಮಾಡುತ್ತಾರೆಯೇ?

(ಉತ್ತರವಿಲ್ಲ)

ಶ್ರೀ ಕೆ. ಶ್ರೀರಾಮುಲು.— ಅನೇಕ ಕಡೆ ಮಾನ್ಯ ಮಂತ್ರಿಗಳಿಗೆ ಗೊತ್ತಿರು

ವಂತೆ ಸ್ಪೈ ಸೈಟ್ಸ್ ಹಂಚಿದ್ದಾರೆ. ಸ್ಪೈ ಸೈಟ್ಸ್ ಎಂದರೆ ಸಾಮಾನ್ಯವಾಗಿ ೫೦ ಅಡಿ ಅಗಲಕ್ಕೆ ಒಳಪಟ್ಟಿರತಕ್ಕವು ಎಂದು ರೂಲ್ಸಿನಲ್ಲಿ ಅಳವಡಿಸಲಾಗಿದೆ. ಆದರೆ ೫೦ ಅಡಿ ಅಗಲ ೬೦ ಅಡಿ ಉದ್ದ ಇರುವಂಥ ಸೈಟುಗಳನ್ನೆಲ್ಲ ಸ್ಪೈ ಸೈಟುಗಳೆಂದು ಕರೆದ್ದಾರೆ. ಇದು ಸರಿಯೇ ?

ಶ್ರೀ ಬಿ. ಬಸವಲಿಂಗಪ್ಪ — ಸ್ಪೈ ಸೈಟ್ಸ್ ಎಂದರೆ ಮಾನ್ಯ ಸದಸ್ಯರು ಹೇಳಿದಂತೆ ಅಲ್ಲ. ಇದನ್ನು ನಿಯಮಾವಳಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಸೈಟು ಎಷ್ಟಾದರೂ ಇರಬಹುದು ಸೈಟುಗಳ ಹಂಚಿಕೆಯನ್ನು ನೋಟಿಫೈ ಮಾಡುತ್ತೇವೆ. ನೋಟಿಫೈ ಮಾಡಿದ ಮೇಲೆ ಸೈಟುಗಳನ್ನು ಹಂಚಿದ ಮೇಲೆ ಅಕಸ್ಮಾತ್ ಉಳಿದಿದ್ದರೆ, ಯಾವುದಾದರೂ ಸರೆಂಡರ್ ಆಗಿದ್ದರೆ, ಅಥವಾ ಸೈಟನ್ನು ಕೊಟ್ಟರವರಿಗೆ ಬೇರೆ ಕಡೆ ಸೈಟು ಅಥವಾ ಮನೆ ಇದ್ದರೆ ಅಂಥವು ಉಳಿಯುತ್ತವೆ. ಅವುಗಳನ್ನು ಸ್ಪೈ ಸೈಟ್ಸ್ ಎಂದು ಹೇಳಿದ್ದೇವೆ. ಅದರ ಪ್ರಕಾರ ಸೈಟಿನ ಅಳತೆ ಎಷ್ಟು ಬೇಕಾದರೂ ಇರಬಹುದು.

ಎಚ್. ಟಿ. ಕೃಷ್ಣಪ್ಪ — ಎಷ್ಟು ಜನ ಶಾಸಕರಿಗೆ ಇಲ್ಲಿಯವರೆಗೆ ತಾವು ಸೈಟುಗಳನ್ನು ಕೊಟ್ಟಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.— ಇದರ ಪಟ್ಟಿ ತಯಾರಿಸಿದ್ದೇನೆ ಅದನ್ನು ಸಭೆಯ ಮುಂದೆ ಇಡುತ್ತೇನೆ. ತಾವು ಎಲ್ಲವನ್ನೂ ವಿವರವಾಗಿ ಅದರಲ್ಲಿ ಪರಿಶೀಲಿಸಬಹುದು.

SRI J P. SARWESH.— May I know the names of the M. L. As and M. L. Cs. who have been allotted site by the Board and those who have sold those sites ?

ಶ್ರೀ ಬಿ. ಬಸವಲಿಂಗಪ್ಪ — ತಾವು ಬೇರೆ ಪ್ರಶ್ನೆ ಕೇಳಿದರೆ ಅದರ ಬಗ್ಗೆ ಎಲ್ಲ ವಿವರಗಳನ್ನೂ ಆಗ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ — ತಾವು ಇಲ್ಲಿ ಕೊಟ್ಟಿರುವ ಸೈಟುಗಳ ಪಟ್ಟಿಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ ಬೆಲೆಯನ್ನು ನಿಗದಿ ಮಾಡಿದ್ದೀರಿ. ಈ ರೀತಿಯಾದ ವ್ಯತ್ಯಾಸ ಬೆಲೆಯಲ್ಲಿ ಏಕೆ ಇರುತ್ತದೆ ?

ಶ್ರೀ ಬಿ. ಬಸವಲಿಂಗಪ್ಪ — ಇದು ಒಂದೇ ರೀತಿಯಾದ ಅಳತೆಯಲ್ಲಿರುವುದಿಲ್ಲ ಮತ್ತು ಇದರ ನಿಯಮಾವಳಿಗಳಿರುತ್ತವೆ. ಅವರಂತೆ ನಿಗದಿ ಮಾಡಿಕೊಡಲಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ — ಸಿವಿಕ್ ಅಮೆನಿಟೀಸ್‌ಗಳು ಇಲ್ಲದೆ ಇರುವ ಕಡೆ ಖಾಸಗಿಯವರು ಸೈಟುಗಳನ್ನು ಮಾಡಿ ಮಾರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ತಡೆಗಟ್ಟಲು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ — ಇದು ಸರಕಾರದ ಗಮನಕ್ಕೆ ಬಂದಿದೆ. ಸಿವಿಕ್ ಅಮೆನಿಟೀಸ್‌ಗಳಿಲ್ಲದೆ ಇರುವ ಏರಿಯಾದಲ್ಲಿ ಸೈಟುಗಳನ್ನು ಮಾರಿರುವುದೂ ಗೊತ್ತಿದೆ ಇದನ್ನು ಮಾಡಕೂಡದು ಎಂದು ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ,

ಇನ್ನು ಮುಂದೆ ಇಂತಹ ಯಾವ ಸೈಟುಗಳನ್ನೂ ಕೊಡಕೂಡದು ಎಂದು ನಾವು ಸ್ಟೇ ಆರ್ಡರು ಕೂಡ ಕೊಟ್ಟಿದ್ದೇವೆ, ಇಂತಹ ಸೈಟುಗಳನ್ನು ಸಾರ್ವಜನಿಕರು ಯಾರೂ ತೆಗೆದುಕೊಳ್ಳಬಾರದು ಎಂದು ಆದೇಶವನ್ನೂ ಕೊಡಲಾಗಿದೆ.

ಶ್ರೀ ಕೆ. ಶ್ರೀನಿವಾಸುಲು — ಸ್ಟೇ ಸೈಟುಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಇಲ್ಲಿ ಹೇಳಿರುವ ಉತ್ತರವನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಟಿಳರಲ್ಲಿ ಆಗಿರುವ ಸೈಟು ಅಲಾಟುಮೆಂಟು ರೂಲ್ಸು ಪ್ರಕಾರ ಮಾಡಿದ್ದರೆ ಅದಕ್ಕೆ ನನ್ನ ಅಡ್ಡಿ ಇಲ್ಲ. ಆದರೆ ಈ ರೂಲ್ಸುಗಳಿಗೇನಾದರೂ ತಿದ್ದುಪಡಿಗಳಾಗಿದ್ದರೆ ಆಗ ಒಪ್ಪಬಹುದು. ಅದಕ್ಕಾಗಿ ಇದರ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಲು ತಾವು ಇಲ್ಲಿ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ ? ಇದಕ್ಕೆ ಕಾರಣ ಇಂದು ಭಾರಿ, ಭಾರಿ ಸೈಟುಗಳನ್ನು ಯಾರ ಯಾರದೋ ಹೆಸರಿನಲ್ಲಿ ಹಂಚುತ್ತಾರೆಂಬ ಶಂಕೆ ಬಂದಿದೆ. ಇದು ರೂಲ್ಸು ಪ್ರಕಾರ ಇವ್ವರೆ ಅದಕ್ಕೆ ನನ್ನ ಅಡ್ಡಿ ಇಲ್ಲ, ಇದಕ್ಕಾಗಿ ನಾನು ಇಲ್ಲಿ ತಮ್ಮನ್ನು ಕೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರ ಅಭಿಪ್ರಾಯ ತಪ್ಪು. ಹಿಂದೆ ಇದ್ದ ರೂಲ್ಸುಗಳನ್ನು ಬದಲಾಯಿಸಿ ಈಚೆಗೆ ನಿಯಮಾವಳಿಗಳನ್ನು ಮಾಡಲಾಗಿದೆ. ಆದುದರಿಂದ ತಾವು ಇಲ್ಲಿ ಹೇಳತಕ್ಕದ್ದು ಸರಿಯಲ್ಲ.

NON-AVAILABILITY OF FERTILIZERS

333. Sri H. G. CHANNAPPA (Magadi).— Will the Minister for Agriculture and Forests be pleased to state:—

(a) whether it is not the policy of the Government to grow more food crops in the State;

(b) whether it is not the policy of the Government to supply manures to the cultivators of all areas of the State in accordance with the above policy;

(c) if so, the reasons for non-availability of fertilizers in many parts of the State;

(d) whether it has come to notice of the Government that any quantity of manure is available at higher rates with the private manure dealers; if so, the reasons for the same;

(e) whether Government intend to issue an order and remove the control imposed on the distribution of fertilzers and to see that it is made available in the Societies and